# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಬಸವ ಜಯಂತಿ ಪ್ರಯುಕ್ತ**

**ಬಸವಣ್ಣನವರು ಮತ್ತು ಚತುರ್ವಿಧ ಸಂಪನ್ನತೆ – ವಿಶೇಷ ಉಪನ್ಯಾಸ**

**ಕಾರ್ಯಕ್ರಮ–23.4.2023**

## ಸಾಮಾಜಿಕ ಚಿಂತನೆಯ ಹರಿಕಾರ ಬಸವಣ್ಣ : ಡಾ. ಮೃತ್ಯುಂಜಯ ರುಮಾಲೆ

12ನೇ ಶತಮಾನದ ಸಂತ ವಿಶ್ವಗುರು ಬಸವಣ್ಣನವರ ದೂರದೃಷ್ಟಿ ಕಲ್ಪನೆ ಇಂದಿಗೂ ಪ್ರಸ್ತುತ, ಬಸವಣ್ಣನವರನ್ನು ಇಲ್ಲದೆ ಸಮಾಜಿಕ ಚಿಂತನೆ ಮಾಡುವುದು ಅಸಾಧ್ಯ ಎಂದು ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ **ಡಾ. ಮೃತ್ಯುಂಜಯ ರುಮಾಲೆ ಅವರು** ಅಭಿಪ್ರಾಯಪಟ್ಟರು.



ಬಸವಣ್ಣನವರ ಭಾವಚಿತ್ರಕ್ಕೆ ಮಾನ್ಯ ಕುಲಪತಿಯವರು ಹಾಗೂ ಗಣ್ಯರು ಪುಷ್ಪ ಅರ್ಪಿಸಿದರು

ಕನ್ನಡ ವಿಶ್ವವಿದ್ಯಾಲಯದ ಭುವನವಿಜಯ ಸಭಾಂಗಣದಲ್ಲಿ ದಿನಾಂಕ 23.4.2023ರಂದು ಬಸವ ಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ **ಬಸವಣ್ಣನವರು ಮತ್ತು ಚತುರ್ವಿಧ ಸಂಪನ್ನತೆ** ಎಂಬ **ವಿಶೇಷ ಉಪನ್ಯಾಸ** ಕಾರ್ಯಕ್ರಮದಲ್ಲಿ ಮಾತನಾಡುತ್ತ, ಸುಮಾರು ವರ್ಷಗಳಿಂದ ನಾವು ಬಸವ ಜಯಂತಿಯನ್ನು ಆಚರಿಸಿಕೊಂಡು ಬಂದಿದ್ದೇವೆ. 12ನೇ ಶತಮಾನದ ಸಮಾಜದಲ್ಲಿ ಸಮಾನತೆಯ ಸಂದೇಶವನ್ನು ಇಡೀ ಲೋಕಕ್ಕೆ ಸಾರಿದ ಬಸವಣ್ಣನವರ ಜಯಂತಿ ಕೇವಲ ವ್ಯಕ್ತಿಯ ಜಯಂತಿಯಾಗದೇ, ಅವರ ಜೀವನ ಮತ್ತು ತತ್ವ ಸಿದ್ಧಾಂತಗಳನ್ನು ನಾವೆಲ್ಲರೂ ಜೀವನದಲ್ಲಿ ರೂಢಿಸಿಕೊಳ್ಳಬೇಕು. ಪ್ರಮುಖವಾಗಿ ಬಸವಣ್ಣನವರ ವಚನದಿಂದ ಪ್ರೇರಿತರಾದ ಹರ್ಡೇಕರ್ ಮಂಜಪ್ಪ ಅವರು ಕೂಡ ಸನ್ಯಾಸತ್ವವನ್ನು ಸ್ವಿಕರಿಸಿದರು. ಬಸವಣ್ಣನವರು ಸ್ಥಾಪಿಸಿದ ಧರ್ಮ ಕೇವಲ ಲಿಂಗಾಯತ ಧರ್ಮವಲ್ಲ, ಇದು ಕನ್ನಡಿಗರ ಧರ್ಮ ಎಂದು ಡಾ. ಎಂ. ಎಂ. ಕಲಬುರ್ಗಿ ಅವರು ಹೇಳಿದ್ದಾರೆ. ಇಡೀ ಸಮಾಜವನ್ನು ಕೇವಲ ರಾಜಕೀಯವಾಗಿ ಅಲ್ಲದೇ ಮೌಲ್ಯ ವ್ಯವಸ್ಥೆಯನ್ನೇ ಶರಣರು ತರಾಟೆಗೆ ತೆಗೆದುಕೊಂಡರು. ಬಸವಣ್ಣನವರ ವಚನ ಕೇವಲ ವಚನಕ್ಕೆ ಸೀಮಿತವಾದುದ್ದಲ್ಲ, ಇಡೀ ಸಮಾಜಕ್ಕೆ ಅನ್ವಯವಾಗುತ್ತದೆ ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ **ಡಾ. ಡಿ.ವಿ.ಪರಮಶಿವಮೂರ್ತಿ ಅವರು** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಕಾಲದಿಂದ ಕಾಲಕ್ಕೆ ವ್ಯಕ್ತಿ ಬಹುತೇಕ ಎಲ್ಲಾ ರಂಗದಲ್ಲೂ ಪ್ರಸ್ತುತವಾಗುತ್ತಾರೆ ಎಂದರೇ ಅದು ಬಸವಣ್ಣನವರು ಮಾತ್ರ. ಬಸವಣ್ಣನವರು ಅನೇಕ ವಲಯಗಳಲ್ಲಿ ತಮ್ಮ ಚಿಂತನೆಯನ್ನು ಬಿತ್ತರಿಸಿದ್ದಾರೆ. ನಮ್ಮ ಕರ್ನಾಟಕದ ಚಿಂತನೆಯ ರತ್ನ ಇಂದು ನಮ್ಮ ದೇಶ ಅಲ್ಲದೇ ವಿದೇಶಗಳಲ್ಲಿ ಕೂಡ ಅನೇಕ ವಿಷಯಗಳಲ್ಲಿ ಇವರ ತತ್ವಗಳು ಒಳಗೊಂಡಿವೆ. ಬಸವಣ್ಣನವರ ತತ್ವಗಳನ್ನು ಎಷ್ಟರ ಮಟ್ಟಿಗೆ ನಾವು ಅಳವಡಿಸಿಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಮಾತು ಆಡದವರಿಗೆ ಮಾತು ಕೊಟ್ಟರು, ಚಿಂತನೆ ನಡೆಸುವವರಿಗೆ ಚಿಂತನೆ ಕೊಟ್ಟರು, ಕೆಳ ಸಮುದಾಯವನ್ನು ಮೇಲೆತ್ತುವ

ಕೇಲಸವನ್ನು ಬಸವಣ್ಣನವರು ಮಾಡಿದ್ದಾರೆ. ಇವರ ತತ್ವ ಸಿದ್ಧಾಂತಗಳನ್ನು ನಾವು ಅಳವಡಿಸಿಕೊಂಡರೇ ನಮ್ಮ ಜನ್ಮ ಪಾವನವಾಗುತ್ತದೆ ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ **ಡಾ. ಎ. ಸುಬ್ಬಣ್ಣ ರೈ ಅವರು** ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಕನ್ನಡ ವಿಶ್ವವಿದ್ಯಾಲಯದ ಉಪಕುಲಸಚಿವರಾದ **ಡಾ. ಎ ವೆಂಕಟೇಶ ಅವರು** ಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ವಿವಿಧ ವಿಭಾಗಗಳ **ಮುಖ್ಯಸ್ಥರು, ವಿವಿಧ ನೀಕಾಯದ ಡೀನರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ** ಸಿಬ್ಬಂದಿ ಉಪಸ್ಥಿತರಿದ್ದರು.



ಡಾ. ಮೃತ್ಯುಂಜಯ ರುಮಾಲೆ ಅವರು ಕಾರ್ಯಕ್ರಮದ ವಿಶೇಷ ಉಪನ್ಯಾಸ ನೀಡಿದರು



ಮಾನ್ಯ ಕುಲಪತಿಯವರಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು


ಮಾನ್ಯ ಕುಲಪತಿಯವರಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಹಾಗೂ ವೇದಿಕೆಯ ಮೇಲಿನ ಗಣ್ಯರು ಡಾ. ಮೃತ್ಯುಂಜಯ ರುಮಾಲೆ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬



## ಬಸವ ಜಯಂತಿ

ವಿಶೇಷ ಉಪನ್ಯಾಸ ಕಾರ್ಯಕ್ರಮ

ಅಧ್ಯಕ್ಷತೆ
**ಡಾ. ಡಿ.ವಿ. ಪರಮಶಿವಮೂರ್ತಿ**
ಮಾನ್ಯ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಶೇಷ ಉಪನ್ಯಾಸ
**ಬಸವಣ್ಣನವರು ಮತ್ತು ಚತುರ್ವಿಧ ಸಂಪನ್ನತೆ**

ಉಪನ್ಯಾಸಕರು
**ಡಾ. ಮೃತ್ಯುಂಜಯ ರುಮಾಲೆ**
ಮುಖ್ಯಸ್ಥರು, ಕನ್ನಡ ವಿಭಾಗ
ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆ

ಸ್ವಾಗತ
**ಡಾ. ಎ. ವೆಂಕಟೇಶ**
ಉಪಕುಲಸಚಿವರು (ಆಡಳಿತ)

ದಿನಾಂಕ: ೨೩.೦೪.೨೦೨೩, ಬೆಳಗ್ಗೆ ೧೦.೩೦ಕ್ಕೆ
ಸ್ಥಳ: ಭುವನವಿಜಯ

**ಸರ್ವರಿಗೂ ಸ್ವಾಗತ**

ಡಾ. ಎ. ಸುಬ್ಬಣ್ಣ ರೈ
ಕುಲಸಚಿವರು

8 ಗುರುವಾರ,27 ಏಪ್ರಿಲ್ 2023, ಗಂಗಾವತಿ
ವಿಜಯ ಕರ್ನಾಟಕ VK

# ‘ಬಸವಣ್ಣನವರ ದೂರದೃಷ್ಟಿ ಕಲ್ಪನೆ ಪ್ರಸ್ತುತ’

**ವಿಜಯನಗರ(ಹೊಸಪೇಟೆ):** ವಿಶ್ವಗುರು ಬಸವಣ್ಣನವರ ದೂರದೃಷ್ಟಿ ಕಲ್ಪನೆ ಇಂದಿಗೂ ಪ್ರಸ್ತುತವಾಗಿದೆ ಎಂದು ಸಾಹಿತಿ ಡಾ.ಮೃತ್ಯುಂಜಯ ರುಮಾಲೆ ಹೇಳಿದರು.

ಬಸವ ಜಯಂತಿ ನಿಮಿತ್ತ ಕನ್ನಡ ವಿವಿಯ ಭುವನವಿಜಯ ಸಭಾಂಗಣದಲ್ಲಿ ನಡೆದ 'ಬಸವಣ್ಣನವರು ಮತ್ತು ಚತುರ್ವಿಧ ಸಂಪನ್ನತೆ' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಬಸವಣ್ಣನವರು ಸ್ಥಾಪಿಸಿದ ಧರ್ಮ ಕೇವಲ ಲಿಂಗಾಯತ ಧರ್ಮವಲ್ಲ, ಇದು ಕನ್ನಡಿಗರ ಧರ್ಮ ಎಂದು ಡಾ.ಎಂ.ಎಂ.ಕಲಬುರ್ಗಿ ಅವರು ಹೇಳಿದ್ದಾರೆ. ಬಸವಣ್ಣನವರ ವಚನ ಕೇವಲ ವಚನಕ್ಕೆ ಸೀಮಿತವಾದುದ್ದಲ್ಲ, ಇಡೀ ಸಮಾಜಕ್ಕೆ ಅನ್ವಯವಾಗುತ್ತದೆ ಎಂದರು.

**ಎಲ್ಲ ರಂಗದಲ್ಲೂ ಪ್ರಸ್ತುತ:** ಕನ್ನಡ ವಿವಿಯ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲದಿಂದ ಕಾಲಕ್ಕೆ ವ್ಯಕ್ತಿ ಬಹುತೇಕ ಎಲ್ಲ ರಂಗದಲ್ಲೂ ಪ್ರಸ್ತುತವಾಗುತ್ತಾರೆ ಎಂದರೇ ಅದು ಬಸವಣ್ಣನವರು ಮಾತ್ರ. ಬಸವಣ್ಣನವರು ಅನೇಕ ವಲಯಗಳಲ್ಲಿ ತಮ್ಮ ಚಿಂತನೆಯನ್ನು ಬಿತ್ತರಿಸಿದ್ದಾರೆ. ಚಿಂತನೆ ನಡೆಸುವವರಿಗೆ ಚಿಂತನೆ ಕೊಟ್ಟರು, ಕೆಳ ಸಮುದಾಯವನ್ನು ಮೇಲೆತ್ತುವ ಕೆಲಸವನ್ನು ಬಸವಣ್ಣನವರು ಮಾಡಿದ್ದಾರೆ. ಇವರ ತತ್ವ ಸಿದ್ಧಾಂತಗಳನ್ನು ನಾವು ಅಳವಡಿಸಿಕೊಂಡರೇ ನಮ್ಮ ಜನ್ಮ ಪಾವನವಾಗುತ್ತದೆ ಎಂದರು.

ಕುಲಸಚಿವ ಡಾ.ಎ.ಸುಬ್ಬಣ್ಣ ರೈ, ಉಪಕುಲಸಚಿವ ಡಾ.ಎ.ವೆಂಕಟೇಶ ಇದ್ದರು.



ಹಂಪಿ ಕನ್ನಡ ವಿವಿಯ ಭುವನವಿಜಯ ಸಭಾಂಗಣದಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಪ್ರಜಾವಾಣಿ ಮಂಗಳವಾರ • ಏಪ್ರಿಲ್ 25, 2023

# ‘ಬಸವಣ್ಣ ಇಲ್ಲದೆ ಸಾಮಾಜಿಕ ಚಿಂತನೆ ಅಸಾಧ್ಯ’

ಪ್ರಜಾವಾಣಿ ವಾರ್ತೆ

**ಹೊಸಪೇಟೆ** (ವಿಜಯನಗರ): ‘12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರು ಇಲ್ಲದೆ ಸಾಮಾಜಿಕ ಚಿಂತನೆ ಮಾಡುವುದು ಅಸಾಧ್ಯ’ ಎಂದು ಹಿರಿಯ ಸಾಹಿತಿ ಮೃತ್ಯುಂಜಯ ರುಮಾಲೆ ತಿಳಿಸಿದರು.

ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಬಸವ ಜಯಂತಿ ಅಂಗವಾಗಿ ಏರ್ಪಡಿಸಿದ್ದ ‘ಬಸವಣ್ಣನವರು ಮತ್ತು ಚತುರ್ವಿಧ ಸಂಪನ್ನತೆ’ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಬಸವ ಜಯಂತಿಯನ್ನು ಪ್ರತಿ ವರ್ಷ ಆಚರಿಸಿಕೊಂಡು ಬಂದಿದ್ದೇವೆ. 12ನೇ ಶತಮಾನದ ಸಮಾಜದಲ್ಲಿ ಸಮಾನತೆಯ ಸಂದೇಶವನ್ನು ಜಗತ್ತಿಗೆ ಸಾರಿದ ಬಸವಣ್ಣನವರ ಜಯಂತಿ ಕೇವಲ ವ್ಯಕ್ತಿಯ ಜಯಂತಿಯಾಗದೇ, ಅವರ ಜೀವನ ಮತ್ತು ತತ್ವ, ಸಿದ್ಧಾಂತಗಳನ್ನು ನಾವೆಲ್ಲರೂ ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದರು.





ಬಸವ ಜಯಂತಿ ಅಂಗವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಭಾನುವಾರ ಏರ್ಪಡಿಸಿದ್ದ ಬಸವಣ್ಣನವರು ಮತ್ತು ಚತುರ್ವಿಧ ಸಂಪನ್ನತೆ’ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಮೃತ್ಯುಂಜಯ ರುಮಾಲೆ ಮಾತನಾಡಿದರು

ಕುಲಪತಿ ಪ್ರೊ. ಡಿ.ವಿ. ಪರಮಶಿವಮೂರ್ತಿ ಮಾತನಾಡಿ, ಕಾಲದಿಂದ ಕಾಲಕ್ಕೆ ವ್ಯಕ್ತಿ ಬಹುತೇಕ ಎಲ್ಲ ರಂಗದಲ್ಲೂ ಪ್ರಸ್ತುತವಾಗುತ್ತಾರೆ ಎಂದರೇ ಅದು ಬಸವಣ್ಣನವರು. ಅವರು ಅನೇಕ ವಲಯಗಳಲ್ಲಿ ತಮ್ಮ ಚಿಂತನೆಯನ್ನು ಬಿತ್ತರಿಸಿದ್ದಾರೆ, ಸಮಾಜದಲ್ಲಿ ಮಹತ್ವದ ಬದಲಾವಣೆ ತರಲು ಶ್ರಮಿಸಿದ್ದಾರೆ ಎಂದರು.

ಕುಲಸಚಿವ ಪ್ರೊ. ಎ. ಸುಬ್ಬಣ್ಣ ರೈ, ಉಪಕುಲಸಚಿವ ಎ. ವೆಂಕಟೇಶ ಇದ್ದರು.

ದಾವಣಗೆರೆ ಉದಯವಾಣಿ
ಸೋಮವಾರ, ಏಪ್ರಿಲ್ 24, 2023

# ಬಸವಣ್ಣ ಸಾಮಾಜಿಕ ಚಿಂತನೆಯ ಚೇತನ

## | ಕನ್ನಡ ವಿಶ್ವವಿದ್ಯಾಲಯದಲ್ಲಿ ಬಸವ ಜಯಂತಿ | ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ

**ಹೊಸಪೇಟೆ:** ಹನ್ನೆರಡನೆಯ ಶತಮಾನದ ಸಂತ ವಿಶ್ವಗುರು ಬಸವಣ್ಣನವರ ದೂರದೃಷ್ಟಿ ಕಲ್ಪನೆ ಇಂದಿಗೂ ಪ್ರಸ್ತುತವಾಗಿದ್ದು, ಬಸವಣ್ಣನವರನ್ನು ಇಲ್ಲದೆ ಸಾಮಾಜಿಕ ಚಿಂತನೆ ಮಾಡುವುದು ಅಸಾಧ್ಯ ಎಂದು ನಗರದ ವಿಜಯನಗರ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ| ಮೃತ್ಯುಂಜಯ ರುಮಾಲೆ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಭುವನವಿಜಯ ಸಭಾಂಗಣದಲ್ಲಿ ಬಸವ ಜಯಂತಿ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ಬಸವಣ್ಣನವರು ಮತ್ತು ಚತುರ್ವಿಧ ಸಂಪನ್ನತೆ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, 12ನೇ ಶತಮಾನದ ಸಮಾಜದಲ್ಲಿ ಸಮಾನತೆಯ ಸಂದೇಶವನ್ನು ಇಡೀ ಲೋಕಕ್ಕೆ ಸಾರಿದ ಬಸವಣ್ಣನವರ ಜಯಂತಿ ಕೇವಲ ವ್ಯಕ್ತಿಯ ಜಯಂತಿಯಾಗದೇ, ಅವರ ಜೀವನ ಮತ್ತು ತತ್ವ ಸಿದ್ಧಾಂತಗಳನ್ನು ನಾವೆಲ್ಲರೂ ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದರು.



ಹೊಸಪೇಟೆ:ಕನ್ನಡ ವಿಶ್ವವಿದ್ಯಾಲಯದಲ್ಲಿ ಬಸವಣ್ಣ ಭಾವಚಿತ್ರಕ್ಕೆ ಗಣ್ಯರು, ಪುಷ್ಪ ನಮನ ಸಲ್ಲಿಸಿದರು.

ಪ್ರಮುಖವಾಗಿ ಬಸವಣ್ಣನವರ ವಚನದಿಂದ ಪ್ರೇರಿತರಾದ ಹರ್ಡೇಕರ್ ಮಂಜಪ್ಪ ಅವರು ಕೂಡ ಸನ್ಯಾಸತ್ವವನ್ನು ಸ್ವೀಕರಿಸಿದರು. ಬಸವಣ್ಣನವರು ಸ್ಥಾಪಿಸಿದ ಧರ್ಮ ಕೇವಲ ಲಿಂಗಾಯತ ಧರ್ಮವಲ್ಲ ಇದು ಕನ್ನಡಿಗರ ಧರ್ಮ ಎಂದು ಡಾ| ಎಂ. ಎಂ. ಕಲಬುರ್ಗಿ ಅವರು ಹೇಳಿದ್ದಾರೆ. ಇಡೀ ಸಮಾಜವನ್ನು ಕೇವಲ ರಾಜಕೀಯವಾಗಿ ಅಲ್ಲದೇ ಮೌಲ್ಯ ವ್ಯವಸ್ಥೆಯನ್ನೇ ಶರಣರು ತರಾಟೆಗೆ ತೆಗೆದುಕೊಂಡರು. ಬಸವಣ್ಣನವರ ವಚನ ಕೇವಲ ವಚನಕ್ಕೆ ಸೀಮಿತವಾದುದ್ದಲ್ಲ, ಇಡೀ ಸಮಾಜಕ್ಕೆ ಅನ್ವಯವಾಗುತ್ತದೆ ಎಂದು ಹೇಳಿದರು.

ಕುಲಪತಿ ಡಾ| ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲದಿಂದ ಕಾಲಕ್ಕೆ ವ್ಯಕ್ತಿ ಬಹುತೇಕ ಎಲ್ಲಾ ರಂಗದಲ್ಲೂ ಪ್ರಸ್ತುತವಾಗುತ್ತಾರೆ ಎಂದರೇ ಅದು ಬಸವಣ್ಣನವರು ಮಾತ್ರ. ಬಸವಣ್ಣನವರು ಅನೇಕ ವಲಯಗಳಲ್ಲಿ ತಮ್ಮ ಚಿಂತನೆಯನ್ನು ಬಿತ್ತರಿಸಿದ್ದಾರೆ. ಕರ್ನಾಟಕದ ಚಿಂತನೆಯ ರಕ್ತ ಇಂದು ನಮ್ಮ ದೇಶ ಅಲ್ಲದೇ ವಿದೇಶಗಳಲ್ಲಿ ಕೂಡ ಅನೇಕ ವಿಷಯಗಳಲ್ಲಿ ಇವರ ತತ್ವಗಳು ಒಳಗೊಂಡಿವೆ. ಬಸವಣ್ಣನವರ ತತ್ವಗಳನ್ನು ಎಷ್ಟರಮಟ್ಟಿಗೆ ನಾವು ಅಳವಡಿಸಿಕೊಂಡಿದ್ದೇವೆ ಎಂದು ನಾವೆಲ್ಲರೂ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು ಎಂದರು.

ಮಾತು ಆಡದವರಿಗೆ ಮಾತು ಕೊಟ್ಟರು, ಚಿಂತನೆ ನಡೆಸುವವರಿಗೆ ಚಿಂತನೆ ಕೊಟ್ಟರು, ಕೆಳ ಸಮುದಾಯವನ್ನು ಮೇಲೆತ್ತುವ ಕೆಲಸವನ್ನು ಬಸವಣ್ಣನವರು ಮಾಡಿದ್ದಾರೆ. ಇವರ ತತ್ವ ಸಿದ್ಧಾಂತಗಳನ್ನು ನಾವು ಅಳವಡಿಸಿಕೊಂಡರೇ ನಮ್ಮ ಜನ್ಮ ಪಾವನವಾಗುತ್ತದೆ ಎಂದರು.

ಕುಲಸಚಿವ ಡಾ| ಎ. ಸುಬ್ಬಣ್ಣ ರೈ ಮಾತನಾಡಿದರು. ಉಪಕುಲಸಚಿವ ಡಾ| ಎ ವೆಂಕಟೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಧ ವಿಭಾಗಗಳ ಮುಖ್ಯಸ್ಥರು, ಡೀನರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇದ್ದರು.